**ಕರ್ನಾಟಕ ಸರ್ಕಾರ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

***ಸಿ.ಸಿ.ನಂ.884/2014***

***ಪಿ.ಡಬ್ಲ್ಯೂ: 19***

***ಸಿ.ಡಬ್ಲ್ಯೂ: 20***

ಸಾಕ್ಷಿದಾರರ **ಹೆಸರು** : ಮಾರುತಿ

ತಂದೆಯ **ಹೆಸರು** : ದೇವದಾಸ್

**ವಯಸ್ಸು** : *32* **ವರ್ಷ**

**ಉದ್ಯೋಗ** : ಚಿನ್ನಬೆಳ್ಳಿ ವ್ಯಾಪಾರ

**ವಾಸಸ್ಥಳ** : ತರೀಕೆರೆ

***ದಿನಾಂಕ: 09-11-2020 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.***

ಪೀಡಬ್ಲ್ಯು ***20*** ರವರು ನ್ಯಾಯಾಲಯದ ಮುಂದೆ ವಿ ಸಿ ಮೂಲಕ ಹಾಜರಾಗಿರುತ್ತಾರೆ.

***ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ.***

ಬಾವಿಕೆರೆಯ ಕಾವೇರಿ ಗ್ರಾಮೀಣ ಬ್ಯಾಂಕಿನಲ್ಲಿ ಬಂಗಾರವನ್ನು ಪರೀಕ್ಷಿಸಿ ತಿಳಿಸಲು ನನ್ನನ್ನು ದಿ: ***03-10-2013*** ರಂದು ಪೋಲೀಸರು ತಿಳಿಸಿದರು. ನಾನು ಬೆಳಿಗ್ಗೆ ***10*** ಗಂಟೆಗೆ ಹೋಗಿ ಮ್ಯಾನೇಜರ್, ಪೋಲೀಸರು ಇದ್ದರು. ಬ್ಯಾಂಕಿನ ಲಾಕರ್ ನಿಂದ ಆಭರಣಗಳನ್ನು ತಂದು ನನಗೆ ತೋರಿಸಿದರು. ನಾನು ಎಲೆಕ್ಟ್ರಾನಿಕ್ ತೂಕದ ಯಂತ್ರವನ್ನು ನನ್ನ ಜೊತೆ ತೆಗೆದುಕೊಂಡು ಹೋಗಿದ್ದೆ. ನಾನು ಆಭರಣಗಳನ್ನು ಪರಿಶೀಲಿಸಿ ತೂಕ ಮಾಡಿ ನೋಡಲಾಗಿ ಅವುಗಳು ಯಾವು ಬಂಗಾರದ ಆಭರಣಗಳು ಆಗಿರಲಿಲ್ಲ. ಆದ್ದರಿಂದ ಅವುಗಳ ಮೌಲ್ಯವನ್ನು ನಾನು ತಿಳಿಸಲಾಗಲಿಲ್ಲ. ಸಾಕ್ಷಿಯು ನಿಪಿ-***9*** ರಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸಹಿಯನ್ನು ನಿಪಿ-***9***(ಐ) ಎಂದು ಗುರುತಿಸಲಾಯ್ತು.

***ಪಾಟೀ ಸವಾಲು : ಆರೋಪಿ ಪರ*** ಶ್ರೀ ಎಂ ಕೆ ಟಿ ***ವಕೀಲರಿಂದ.***

ನಾನು ಬಾವಿಕೆರೆಯ ಕಾವೇರಿ ಗ್ರಾಮೀಣ ಬ್ಯಾಂಕಿನ ಖಾಯಂ ಅಪ್ರೈಸರ್ ಅಲ್ಲ ಎಂದರೆ ಸರಿ. ನನಗೆ ಪೋಲೀಸರು ಬಂಗಾರದ ಆಭರಣಗಳನ್ನು ಪರೀಕ್ಷಿಸಲು ಮುಂಚಿತವಾಗಿ ನೋಟೀಸು ನೀಡಿದ್ದರು. ನಾನು ಬ್ಯಾಂಕಿನಲ್ಲಿ ಯಾರ ಹೆಸರಿನಲ್ಲಿ ಇಟ್ಟಿದ್ದ ಬಂಗಾರದ ಆಭರಣಗಳನ್ನು ಪರೀಕ್ಷಿಸಿದೆ ಎನ್ನುವ ಬಗ್ಗೆ ಈಗ ಹೇಳಲಾಗುವುದಿಲ್ಲ. ನಾನು ಆಭರಣಗಳನ್ನು ಪರೀಕ್ಷೆ ಮಾಡುವ ಕಾಲಕ್ಕೆ ಆರೋಪಿ ಇರಲಿಲ್ಲ ಎಂದರೆ ಸಾಕ್ಷಿಯು ಈಗ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ನಾನು ಪರೀಕ್ಷೆ ಮಾಡಿದ ದಿನವನ್ನು ಹೊರತುಪಡಿಸಿ ಅದರ ಪೂರ್ವದಲ್ಲಾಗಲೀ ಅದರ ನಂತರವಾಗಲೀ ಬ್ಯಾಂಕಿನ ಆಭರಣಗಳನ್ನು ಪರೀಕ್ಷೆ

ಮಾಡಿಲ್ಲ ಎಂದರೆ ಸರಿ. ನಾನು ಚಿನ್ನ ಬೆಳ್ಳಿ ವ್ಯಾಪಾರಿ ಎಂಬ ಬಗ್ಗೆ ನನ್ನ ಬಳಿ ಪರವಾನಿಗೆ ಪತ್ರ ಇರುತ್ತದೆ. ಆದರೆ ಅದನ್ನು ಪೋಲೀಸರಿಗೆ ನೀಡಿರುವುದಿಲ್ಲ. ನಾನು ಪೋಲೀಸರ ಮುಂದೆ ಹೇಳಿಕೆ ನೀಡಿಲ್ಲ ಎಂದರೆ ಸಾಕ್ಷಿಯು ನಾನು ಪರೀಕ್ಷೆ ಮಾಡಿದ್ದಕ್ಕಾಗಿ ನನ್ನ ಸಹಿ ಮಾಡಿರುತ್ತೇನೆಂದು ನುಡಿಯುತ್ತಾರೆ. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಪೋಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

***<u>ಮರುವಿಚಾರಣೆ</u>ಃ ಇರುವುದಿಲ್ಲ.***

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

Sd/-

***ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು***
***ಪ್ರ.ದ.ನ್ಯಾ.ದಂ.ರವರು,ತರೀಕೆರೆ.***